ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಮ. ಎಫ್. ಸಿ ನ್ಯಾಯಾಲಯ, ಯಾದಗಿರಿ.

<u>ಸಿ.ಸಿ ನಂಃ **296/2020**</u>

ಫಿರ್ಯಾದಿದಾರಃ ಕರ್ನಾಟಕ ಸರ್ಕಾರ ಪರವಾಗಿ ಯಾದಗಿರಿ (ಗ್ರಾ) ಪೊಲೀಸ ಠಾಣೆ.

// ವಿರುದ್ಧ //

ರವಿಕುಮಾರ

| | |
|---|---|
| ಆರೋಪಿ | ರವಿಕುಮಾರ ತಂದೆ ಜ್ಞಾನಮಿತ್ರ ನರಸಣ್ಣೋರ, ವಃ 24 ವರ್ಷ, ಉಃ ವ್ಯಾಪಾರ, ಸಾಃ ಯಡ್ಡಳ್ಳಿ ತಾಃ ಜಿಃ ಯಾದಗಿರಿ |

<u>ದಂಡ ಪ್ರಕ್ರೀಯಾ ಸಂಹಿತೆ ಕಲಂಃ **313** ರಡಿಯಲ್ಲಿ ಆರೋಪಿಯ ಹೇಳಿಕೆ.</u>

ಪ್ರಶ್ನೆ **1** ಃ ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

ಉತ್ತರಃ

ಪ್ರಶ್ನೆ **2** ಃ ಚಾಸಾಃ 4 ಪ್ರಾಸಾಃ 1 ಪ್ರಭುಗೌಡ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿಯುತ್ತಾ, ದಿನಾಂಕ 08-02-2020 ರಂದು ಸಂಜೆಃ 5.00 ರಿಂದ 6.00 ಗಂಟೆಯವರೆಗೆ ಯಡ್ಡಳ್ಳಿ ಗ್ರಾಮದಲ್ಲಿ ಮಾಹಿತಿ ಬಂದ ಮೇರೆಗೆ ಹೋಗಿ ದಾಳಿ ಮಡಿದಾಗ ಚಾಸಾಃ 1 ರವರು ನಮಗೆ ಆರೋಪಿತನು ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ನೀಡಿರುತ್ತಾರೆ, ಆಗ ನಾನು ಚಾಸಾಃ 5 ರಿಂದ 7 ರವರು ಹಾಜರಿದ್ದೇವು. ಸಂಜೆಃ 6.15 ಕ್ಕೆ ಹೋಗಿ ಯಕೋಬಾ ದಾಸರ ಮನೆಯ ಹತ್ತಿರ ಮರೆಯಾಗಿ ನಿಂತು ನೋಡಿದಾಗ ಆರೋಪಿತನ ಅಂಗಡಿಯ ಮೇಲೆ ದಾಳಿ ಮಾಡಿದಾಗ ಓರಿನಲ್ ಚಾಯ್ಸ 90 ಎಮ್ ಎಲ್ ನ 50 ಪ್ಯಾಕೆಟಗಳು ಸಿಕ್ಕಿರುತ್ತವೆ. ಅದರಲ್ಲಿ ಒಂದು ಪ್ಯಾಕೆಟನ್ನು ಎಫ್ ಎಸ್ ಎಲ್ ವರದಿಗಾಗಿ ಕಳುಹಿಸಿರುತ್ತೇವೆ. ಆರೋಪಿತನ ವಿಚಾರಣೆ ಮಾಡಿರುತ್ತೇವೆ. ಆಗ ಅವನು ತನ್ನ ಹೆಸರನ್ನು ಹೇಳಿರುತ್ತಾನೆ. ಸಂಜೆಃ 6.20 ರಿಂದ 7.20 ರವೆರೆಗ ಪಂಚನಾಮೆಯನ್ನು ಜರುಗಿಸಿರುತ್ತೇವೆ. ನಂತರ ಮರಳಿ ಠಾಣೆಗೆ ಬಂದು ಚಾಸಾಃ 9 ರವರಿಗೆ ಮು. ಮಾ. ಮತ್ತು ಕಡತಗಳನ್ನು

ನೀಡಿರುತ್ತೇನೆ. ಸಾಕ್ಷಿಯು ಒಂದು ಪ್ಯಾಕೆಟನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ನಿವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ 3 ಃ ಚಾಸಾಃ 9 ಪ್ರಾಸಾಃ 3 ಶಾಂತಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿಯುತ್ತಾ, ದಿನಾಂಕ 08-02-2020 ರಂದು ರಾಃ 08.25 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಾಸಾಃ 1 ರವರು ಮುದ್ದೆ ಮಾಲು ಮತ್ತು ಜಪ್ತಿ ಪಂಚನಾಮೆ, ಆರೋಪಿಯನ್ನು ಹಾಜರು ಪಡಿಸಿದಾಗ ನಾನು ಸದರಿ ಆಧಾರದ ಮೇಲೆ ನಮ್ಮ ಠಾಣಾ ಗುನ್ನೆ ಸಂಖ್ಯೆಃ 21/2020 ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ಪ್ರ. ವ. ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿ ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಚಾಸಾಃ 4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದು ಜಪ್ತಿ ಪಂಚನಾಮೆ ಆಗಿದ್ದು ಅದನ್ನು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಲೇ ನಿಪಿ-1 ಎಂದು ಸಾಕ್ಷಿಯ ಸಹಿ ನಿಪಿ-1(ಬಿ) ಎಂದು ಗುರುತಿಸಲಾಯಿತು. ದಿನಾಂಕ 09-03-2020 ರಂದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಕಳುಹಿಸಿರುತ್ತೇನೆ. ನಂತರ ಸದರಿ ವರದಿಯನ್ನು ದಿಃ 17-03-2020 ರಂದು ಪಡೆದಿರುತ್ತೇನೆ. ಸದರಿ ವರದಿಯನ್ನು ನಿಪಿ-3 ಎಂದು ಸಾಕ್ಷಿಯ ಸಹಿ ನಿಪಿ-3(ಎ) ಎಂದು ಗುರುತಿಸಲಾಯಿತು. ಅಬಕಾರಿ ಇಲಾಖೆಗೆ ದಿನಾಂಕಃ 09-03-2020 ರಂದು ನಿಪಿ-4 ರಂತೆ ಪತ್ರ ವ್ಯವಹಾರವನ್ನು ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಾಲಯಿತು. ದಿನಾಂಕಃ 21-03-2020 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಆರೋಪಿ ಮತ್ತು ಮು. ಮಾ. ನ್ನು ನೋಡಿ ಗುರುತಿಸಿರುತ್ತಾರೆ. ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ನಿವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ **4** ಃ ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ **5** ಃ ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ **6** ಃ ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಭಿರಕ್ಷಣಾ ಸಾಕ್ಷ್ಯ ಇದೆಯಾ?

ಉತ್ತರಃ

**(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೊಪಣೆಯನ್ನು ಆರೋಪಿತನಿಗೆ ಓದಿ ಹೇಳಲಾಯಿತು.)**

ದಿನಾಂಕಃ **10-04-2026**
ಸ್ಥಳ ಃ ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ